**ಪಿಡಬ್ಲ್ಯೂ-1**

ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದ ಮೇರೆಗೆ ದಿನಾಂಕಃ **15-10-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಎನ್.ಎಸ್.ಎಸ್. ವಕೀಲರಿಂದಃ-

ನಾನು ನನ್ನ ಹೆಣ್ಣು ಮಕ್ಕಳ ಜೊತೆ ಚೆನ್ನಾಗಿದ್ದೇನೆ. ನಾನು ಎದುರುದಾರರ ಮೇಲೆ ಯಾವುದೇ ದ್ವೇಷ ಸಾಧಿಸುತ್ತಿಲ್ಲ. ಆತ ನನ್ನ ಮಗ. ಆತ ನನ್ನನ್ನು 3 ವರ್ಷದ ಹಿಂದೆ ಮನೆ ಬಿಟ್ಟು ಓಡಿಸಿರುತ್ತಾನೆ. 3 ಜನ ಹೆಣ್ಣು ಮಕ್ಕಳ ನಂತರ ಎದುರುದಾರ ಜನಿಸಿರುತ್ತಾನೆ. ನಾನು ಸಿವಿಲ್ ನ್ಯಾಯಾಲಯದಲ್ಲಿ ರಾಜಿ ಅರ್ಜಿಗೆ ಸಹಿ ಮಾಡಿಲ್ಲ ನನಗೆ ಓದಿ ಹೇಳಿಲ್ಲ. ನನ್ನ ಜೊತೆಗೆ ಹೆಣ್ಣು ಮಕ್ಕಳು ಬಂದಿದ್ದರು. ನಿಆರ್-2 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಮತ್ತು ತನ್ನ ಹೆಣ್ಣು ಮಕ್ಕಳ ಫೋಟೋ ಇರುವುದಾಗಿ ಒಪ್ಪುತ್ತಾರೆ ಆದರೆ ರಾಜಿ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ನನ್ನ ಹೆಣ್ಣು ಮಕ್ಕಳು ರಾಜಿ ಮಾಡಿಕೊಳ್ಳಲು ತಕರಾರು ಮಾಡಿರುತ್ತಾರೆ. ನಾನು ರಾಜಿ ಮಾಡಿಕೊಳ್ಳಲು ತಯಾರಿಲ್ಲ ಎಂದು ನಾನು ಪ್ರತ್ಯೇಕ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ. ನನ್ನ ಹೆಣ್ಣು ಮಕ್ಕಳು ರಾಜಿ ಡಿಕ್ರಿಯಂತೆ ಭಾಗ ತೆಗೆದುಕೊಂಡು ಅವರಿಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನಾವು ಯಾರೂ ಮೇಲ್ಮನವಿದಾರರ ರಾಜಿ ಅರ್ಜಿಯನ್ನು ಮೋಸದಿಂದ ತಯಾರು ಮಾಡಿರುತ್ತಾರೆಂದು ದೂರು ಸಲ್ಲಿಸಿಲ್ಲ. ನಾವು ಮನಃಪೂರ್ವಕವಾಗಿ ಒಪ್ಪಿ ರಾಜಿ ಮಾಡಿಕೊಂಡಿದ್ದರೂ ಅದರಂತೆ ರಾಜಿ ಡಿಕ್ರಿಯಾಗಿದ್ದರೂ ಈಗ ಅದು ನಮ್ಮ ಒಪ್ಪಿಗೆಯಂತೆ ಆಗಿಲ್ಲ ಎಂದು ಸುಳ್ಳು ವಾದಿಸುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಣ್ಣು ಮಕ್ಕಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **15-10-2025.**